ಜಾನುವಾರು ಔಷಧಿ ಖರೀದಿಯಲ್ಲಿ ಅವ್ಯವಹಾರ

1744 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿಗ್ರಾಮೀಣ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95ನೇ ಸಾಲಿನಲ್ಲಿ ಜಾನುವಾರು ಔಷಧಿ ಖರೀದಿಸುವ ಸಂಬಂಧ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳು, ನೌಕರರು ಯಾರು? (ವಿವರ ಒದಗಿಸುವುದು)*

ಇ) *ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ತಪ್ಪಿತಸ್ಥರ ಮೇಲೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಮೈಸೂರು ಚಾಮುಂಡಿ ಕ್ರೀಡಾಂಗಣ ನಿರ್ಮಾಣದ ಟೆಂಡರ್‌ದಾರರಿಗೆ ಹಣ ಪಾವತಿ

1746 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತ ರಾಜ್ಯ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳ ಕ್ರೀಡಾಂಗಣ ನಿರ್ಮಾಣಕ್ಕೆ ಟೆಂಡರ್ (ಗುತ್ತಿಗೆ) ಮುಖಾಂತರ ಅಂದಾಜಿಸಲಾದ ಒಟ್ಟು ಮೊತ್ತವೆಷ್ಟು?*

ಆ) *ಮೈಸೂರಿ ಟೆಂಡರ್‌ದಾರರು ಕಟ್ಟಡ ನಿರ್ಮಾಣಕ್ಕೆ ವೆಚ್ಚ ಮಾಡಿದ ಪೂರ್ಣ ಹಣ ಸಂದಾಯವಾಗಿದೆಯೇ? ಸಂದಾಯವಾಗಿಲ್ಲದಿದ್ದಲ್ಲಿ ಯಾವಾಗ ಪೂರ್ಣ ಹಣ ಪಾವತಿಸಲಾಗುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಕಾಮಗಾರಿಗಳ ಒಟ್ಟು ಅಂದಾಜು ವೆಚ್ಚ ರೂ. 5607.32 ಲಕ್ಷಗಳು

ಆ) ಪೂರ್ಣ ಹಣ ಸಂದಾಯವಾಗಿರುವುದಿಲ್ಲ. ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ. ಇದು ತೆರವಾದ ನಂತರ ಹಣ ಪಾವತಿಸಲಾಗುವುದು.